

ಸ್ಥಳೀಯ ಸಾರಿಗೆ:
ಅಂದ ಚೆಂದದ ಮೆಟ್ರೋ

ನೋಟ ಕಾಣುತ್ತದೆ. ಅಲ್ಲಿಂದ ಹೊರಬಂದರೆ ಅಲ್ ಅಕ್ಸಾ ಮಸೀದಿ ಹೊಂಬಣ್ಣದಿಂದ ಕಂಗೊಳಿಸುವ ದೃಶ್ಯ ಎದುರಾಗುತ್ತದೆ.

ಗೋಳು ಗೋಡೆಯ ಆವರಣದಲ್ಲಿ ಒಂದು ತಾಸು ಓಡಾಡಿದ ಬಳಿಕ ನಮ್ಮ ಗೈಡ್ ಮತ್ತೆ ಅದೇ ಸ್ಥಳದಲ್ಲಿ ಪ್ರತ್ಯಕ್ಷಳಾದಳು. ಸಮಯ ಹನ್ನೊಂದು ಆಗಿದ್ದರೂ 'ಈಗ ಊಟದ ಸಮಯ' ಎಂದು ರೆಸ್ಟೋರೆಂಟ್‌ಗೆ ಕರೆದೊಯ್ದು ಪಕ್ಕಾ ಇಸ್ರೇಲಿ ಖಾದ್ಯ ತಿನಿಸಿದಳು. 'ಅನ್ನದಾತಾ ಸುಖೀಭವ' ಎಂದು ಹಾರೈಸಿ ಹೊರ ಬಂದಾಗ, 'ಆಯಿಯೇ ಸಾಬ್ ಚಾಯ್ ಪೀಲೀಜಿಯೇ' ಎಂಬ ಮಾತು ಕೇಳಿ ವಿಸ್ಮಯದ ಕಡಲಲ್ಲಿ ಬಿದ್ದೆವು!

ಅವನ ಹೆಸರು ಎಂಥದೋ ಸಿಂಗ್ ಅಂತೆ. ಮೂಲ ಊರು ವಾರಾಣಸಿ. ಮೂವತ್ತು ವರ್ಷಗಳ ಹಿಂದೆಯೇ ಬಂದ ಕುಟುಂಬವದು. ಬರೀ ಚಹಾ ಮಾರಾಟ; ಅದರಲ್ಲೇ ನಾಲ್ಕೈದು ಬಗೆ. ರೂಪಾಯಿ ನಾನ್ನೂರಕ್ಕೆ ಒಂದರಂತೆ ಆರೂ ಜನ 'ಇಂಡಿಯನ್ ಚಾಯ್' ಕುಡಿದು ಸಂತೃಪ್ತರಾದೆವು ('ದೈನಿಕ್ ಜಾಗರಣ್' ಪತ್ರಕರ್ತ ಎಸ್.ಪಿ. ಸಿಂಗ್ ಅವತ್ತೇ ಹೋಟೆಲಿನ ಲಾಂಜ್‌ನಲ್ಲೇ ಕೂತು 'ಜೆರೂಸಲೇಮ್ ಮೇ ಧಡಕ್ತಾ ಹುವಾ ವಾರಾಣಸಿ ಕಾ ದಿಲ್' ಎಂಬ ಲೇಖನ ಬರೆದು, ಮರುದಿನ ಅದು ಪ್ರಕಟವೂ ಆಯಿತೆನ್ನಿ!)

ನಾಝಿಗಳ ಕೈಯಲ್ಲಿ ಹತರಾದವರ ನೆನಪಿನ ಯಾದ್ ವಶೇಮ್, ಹಳೆಯ ಜೆರೂಸಲೇಮ್ ಗೋಡೆಗಳು, ಅಲ್ಲಲ್ಲಿ ಪ್ರಾರ್ಥನಾ ಮಂದಿರಗಳನ್ನು ಮಧ್ಯಾಹ್ನದವರೆಗೆ ತೋರಿಸಿದ ಗೈಡ್ ನಶಿಮಾ, ಉಳಿದಿದ್ದೆಲ್ಲ ನಿಮ್ಮಿಷ್ಟ ಎಂದು ಶುಭಾಶಯ ಕೋರಿ ಬೀಳ್ಕೊಂಡಳು. ಹಿತವಾದ ಚಳಿಯಲ್ಲಿ ಮತ್ತೊಮ್ಮೆ ವಾರಾಣಸಿ ಚಾಯ್ ಕುಡಿದು ಅಲೆಮಾರಿಯಾಗ ಹೊರಟೆವು. ಇಬ್ಬರು ಮ್ಯೂಸಿಯಂ ನೋಡಲು ಹೋದರೆ, ಉಳಿದವರು ಜೆರೂಸಲೇಮ್ ಬೀದಿ ಸುತ್ತಲು ನಡೆದೆವು.

## ಎಂಥ ಸೊಬಗಿನ ನಗರಿ!

ಇತಿಹಾಸವನ್ನೂ ಧಾರ್ಮಿಕ ತುಮುಲವನ್ನೂ ಹಾಸಿ ಹೊದ್ದರೂ ದಿನದ ಇಪ್ಪತ್ನಾಲ್ಕು ತಾಸು ಎಚ್ಚರವಾಗಿರುವ ನಗರ. ಜೀವನದಲ್ಲಿ ಒಮ್ಮೆಯಾದರೂ ಈ ನೆಲ ಸ್ಪರ್ಶಿಸಬೇಕು ಎಂಬ ಹಂಬಲ ಮೂರು ಧರ್ಮಗಳ ಜನರದು. ಅದಕ್ಕೆ ಪೂರಕವಾಗಿ ನಗರದಲ್ಲಿ ವ್ಯವಸ್ಥೆಗಳಿವೆ. ಎಷ್ಟೇ ಪ್ರವಾಸಿಗರು ಬಂದರೂ ಅಸ್ತವ್ಯಸ್ತ, ಜನಜಂಗುಳಿ, ಗದ್ದಲಗಲಭೆಯ ಸುಳಿವಿಲ್ಲ. ಅಚ್ಚುಕಟ್ಟಾದ ರಸ್ತೆಗಳಲ್ಲಿ ಕಿಲೋಮೀಟರ್ ನಡೆದರೂ ಆಯಾಸವಾಗದಂತೆ ಹೂದೋಟಉದ್ಯಾನ ಸೃಷ್ಟಿಯಾಗಿವೆ. ನಡೆದೂ ನಡೆದೂ ಸಾಕೆನಿಸಿದಾಗ ಮನಮೋಹಕ ಬೋಗಿಯ ಮೆಟ್ರೋ ರೈಲು ನಮ್ಮೆದುರು ಕಂಡಿತು. ಟಿಕೆಟ್ ಪಡೆದು (ಸಾಕಷ್ಟು ದುಬಾರಿಯೇ ಸೈ) ಒಳಹತ್ತಿದೆವು; ಇಳಿದಿದ್ದು ಹಳೆಯ ಮಾರುಕಟ್ಟೆಯಲ್ಲಿ (ಓಲ್ಡ್ ಸಿಟಿ ಮಾರ್ಕೆಟ್).

ಇದೊಂದು ಪ್ರಮುಖ ವಾಣಿಜ್ಯಿಕ ಕೇಂದ್ರ. ಆಭರಣಗಳು, ಸ್ಮರಣಿಕೆ, ಬಟ್ಟೆ, ಟೋಪಿ, ಬೆಲ್ಟ್, ಬ್ಯಾಗ್ ಮಾರಾಟ ನೋಡಿದರೆ ನಮ್ಮ ಬೆಂಗಳೂರಿನ ಮೆಜೆಸ್ಟಿಕ್ ನೆನಪಾಯಿತು. ಇಲ್ಲಿಯೂ ಧಾರಾಳವಾಗಿ ಚೌಕಾಸಿ ನಡೆಸಬಹುದು. ಏಸು ಸಮಾಧಿ ಬಳಿ ಸಿಗುವ ದುಬಾರಿ ಸ್ಮರಣಿಕೆಗಳ ಬದಲಿಗೆ ಅದರ ಅರ್ಧದಷ್ಟು ಕಡಿಮೆ ದರದಲ್ಲಿ ಅವು ಇಲ್ಲಿ ಲಭ್ಯ.

ರಾಶಿ ರಾಶಿ ಕಿತ್ತಲೆ, ಸೇಬು, ಲಿಚಿ, ಬಾಳೆ, ದ್ರಾಕ್ಷಿ, ದಾಳಿಂಬೆ ಹಣ್ಣುಗಳ ಜತೆ ಮೆತ್ತನೆಯ ಖರ್ಜೂರದ ಪಾಕೆಟ್‌ಗಳು ಆಕರ್ಷಿಸಿದವು. ಇನ್ನಷ್ಟು ಮುಂದೆ ಹೋದಾಗ, ಆಗಷ್ಟೇ ಕಟಾವಾದ ಕಡುಗೆಂಪು ಬಣ್ಣದ ಸ್ಟ್ರಾಬೆರಿ. ಡಾಲರ್ ಮೊತ್ತದಲ್ಲೂ ವಹಿವಾಟು ನಡೆಯುತ್ತದಾದ್ದರಿಂದ ಕರೆನ್ಸಿ ಬದಲಾವಣೆ ಅನಗತ್ಯ.

ಜೆರೂಸಲೇಮ್‌ನಲ್ಲಿ ಪ್ರವಾಸಿಗರಿಂದ ತುಂಬಿ ತುಳುಕುವ ಇನ್ನೊಂದು ತಾಣ, ಮಹಾನೆ ಯೆಹೂದಾ ಮಾರುಕಟ್ಟೆ. ಇಲ್ಲಂತೂ ಏನುಂಟು ಏನಿಲ್ಲ! ತಿಂಡಿಪೋತರಿಗೆ ಸ್ವರ್ಗದಂತೆ! ಒಂದೊಂದೇ ಮಳಿಗೆಯಲ್ಲಿ ಇಣುಕುತ್ತ ಹೋದಾಗ, ಹೆಸರು ತಿಳಿಯದ ಖಾದ್ಯಗಳ ದೊಡ್ಡ ಪಾತ್ರೆಗಳು ಅಲ್ಲಿದ್ದವು. ಮಾಂಸಾಹಾರಿಗಳಿಗೆ ಭೂರಿ ಭೋಜನದ ಅವಕಾಶ. ಸಂಜೆ ಲಘು ಉಪಾಹಾರ ಸೇವನೆ ಆಸೆಯಿಂದ ರೆಸ್ಟೋರೆಂಟ್ ಒಂದರ ಒಳಹೋದರೆ ಏನು ತಿನ್ನಬೇಕೆಂಬುದೇ ತಿಳಿಯಲಿಲ್ಲ. ಕಡಲೆ ಬೇಳೆ ಸಾಗು, ಕ್ಯಾರೆಟ್ ಸೂಪ್ ತರಹ ಒಂದೆರಡು ಐಟಂ ಕಂಡವಾದರೂ ಪ್ರಯೋಗಕ್ಕೆ ನಾವೇ ಮುಂದಾಗಲಿಲ್ಲ. ಕೋಳಿ, ಮೊಟ್ಟೆ ಖಾದ್ಯಕ್ಕಿಂತ ಬೀಫ್ ಹೆಚ್ಚು. ಕೊನೆಗೆ ತಿಂದಿದ್ದು ಅನ್ನ ಬೆಂಡೆಕಾಯಿ ಗೊಜ್ಜು (?). ಯಥೇಚ್ಛ ಹಾಲುಮೊಸರು; ಬೆಣ್ಣೆಯಂತೂ ಇದ್ದೇ ಇತ್ತು.

## ಬಣ್ಣದ ಲೋಕ

ಸಂಜೆ ಕ್ರಮೇಣ ಕತ್ತಲು ಕವಿಯುತ್ತಿದ್ದಂತೆ, ಅಂಗಡಿ, ಶಾಪಿಂಗ್ ಮಾಲ್‌ಗಳ ಎದುರು ದೀಪಗಳ ವೈಭವ ಲೋಕ ತೆರೆದುಕೊಂಡಿತು. ಹಾಡುಗಾರರ ತಂಡ ಫುಟ್‌ಪಾತ್ ಮೇಲೆ ವಾದ್ಯಗೋಷ್ಠಿ ಶುರು ಮಾಡಿತು. ಯುವಜೋಡಿಗಳ ನೃತ್ಯದ ಜತೆಗೆ ಆಸುಪಾಸಿನಲ್ಲಿರುವ ಮಳಿಗೆಯಿಂದ ಪಾನೀಯಗಳ ಸರಬರಾಜು ಶುರುವಾಯಿತು.

ಜಗತ್ತಿನ ಪ್ರಮುಖ ಧರ್ಮಗಳ ಆರಾಧನೆ ಕೇಂದ್ರವಾದ ಜೆರೂಸಲೇಮ್, ಜಗತ್ತಿನ ವಾಣಿಜ್ಯ ಚಟುವಟಿಕೆಗಳ ಕೇಂದ್ರವೂ ಆಗಿತ್ತು. 3000 ವರ್ಷಗಳಿಗೂ ಅಧಿಕ ಇತಿಹಾಸ ಹೊಂದಿರುವ ಈ ಪಟ್ಟಣ, ಹತ್ತಾರು ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿತ್ತು. ಪ್ರತಿ ಕಲ್ಲಿನಲ್ಲೂ, ಹೆಜ್ಜೆಹೆಜ್ಜೆಗೂ ಇತಿಹಾಸವನ್ನು ಹುದುಗಿಸಿಕೊಂಡಿರುವ ಜೆರೂಸಲೇಮ್‌ಗೆ ವರ್ಷಪೂರ್ತಿ ಪ್ರವಾಸಿಗರ ಧಾರೆ ಇದ್ದಿದ್ದೇ. ಗಡಿ ಹಂಚಿಕೊಂಡಿರುವ ದೇಶಗಳ ಜತೆಗೆ ಸದಾ ಹೊಡೆದಾಡುತ್ತ, ಪ್ರತಿಕ್ಷಣದಲ್ಲೂ ಆತಂಕದ ಬದುಕು ಸಾಗಿಸುತ್ತಿದ್ದರೂ ಪ್ರಾಚೀನ ನಗರಿ ಜೆರೂಸಲೇಮ್‌ಗೆ ಬರುವವರ ಸಂಖ್ಯೆಯೇನೂ ಕಮ್ಮಿಯೇನಿಲ್ಲ.

ಏಸುವನ್ನಾಗಲೀ, ಪ್ರವಾದಿಯನ್ನಾಗಲೀ ಹುಡುಕುತ್ತ ಬರುವವರಿಗೆ ಏನಾದರೂ ಸಿಗುವ ನಂಬಿಕೆ ಇದ್ದೇ ಇದೆ. ಇವರೊಟ್ಟಿಗೆ ಪವಿತ್ರ ಪಶ್ಚಿಮ ಗೋಡೆಗೆ ಹಣೆಹಚ್ಚಿ ನಿಂತು, ಕಣ್ಣೀರು ಸುರಿಸುವ ಸಮುದಾಯವೂ ಇದೆ. ಮೇಲ್ನೋಟಕ್ಕೆ ಸಾಮರಸ್ಯದ ಪ್ರತೀಕದಂತೆ ಭಾಸವಾಗುವ ಜೆರೂಸಲೇಮ್, ತನ್ನೊಡಲಲ್ಲಿ ಇಟ್ಟುಕೊಂಡಿರುವ ಕದನಗಳ ಕಥೆ ಹತ್ತಾರು.

ಮಹಾನೆ ಯೆಹೂದಾ ಮಾರುಕಟ್ಟೆಯಲ್ಲಿ ಸ್ಟ್ರಾಬೆರಿ, ಖರ್ಜೂರ ಹಾಗೂ ಆಲಿವ್ ತೈಲ ಖರೀದಿಸಿ, ಸ್ಮರಣಿಕೆ ಖರೀದಿಸಿ ಬ್ಯಾಗಿಗೆ ತುಂಬುವಾಗ ನಗುಮೊಗದ ವ್ಯಾಪಾರಿ ಒಂದೆರಡು ಖರ್ಜೂರವನ್ನು ಕೈಗಿತ್ತು, 'ತಿಂದು ನೋಡಿ' ಎಂದ. ಬಾಯಿಯಲ್ಲಿಟ್ಟರೆ ಕರಗುವಂಥ ಮೆತ್ತನೆಯ ಖರ್ಜೂರ! ಎಂಥೆಂಥ ಕಠಿಣ ಪರಿಸ್ಥಿತಿ ಎದುರಿಸಿ ಬೆಳೆದಿದ್ದೋ ಅದು! ಸಾವಿರಾರು ವರ್ಷಗಳ ಸಮರ ಸಂಘರ್ಷ ಅನುಭವಿಸಿ, ಇತಿಹಾಸದ ರಸವತ್ತಾದ ಕಥೆ ಹೇಳುತ್ತ ನಿಂತ ಜೆರೂಸಲೇಮ್ ತರಹವೇ!

ಚಿತ್ರಗಳು ಲೇಖಕರವು

ಪ್ರತಿಕ್ರಿಯಿಸಿ: feedback@sudha.co.in